ಸಭೆಯನ್ನು ಇನ್ನೂ ಸುಸೂತ್ರವಾಗಿ ಅರ್ಥಪೂರ್ಣವಾಗಿ ನಡೆಸುವುದಕ್ಕೆ ಸಹಕಾರಿಯಾದೀತೆಂದು ನನಗೆ ಅನ್ನಿಸುತ್ತದೆ. ಆದ್ದರಿಂದ ಈ ಸಭೆಯನ್ನು ಮುಂದಕ್ಕೆ ಹಾಕಿದ ಉದ್ದೇಶ, ನಾವೆಲ್ಲರೂ ಸ್ವಲ್ಪ ಇದರ ಬಗ್ಗೆ ಆತ್ಮಶೋಧ ಮಾಡಿಕೊಂಡರೆ ಒಳ್ಳೆಯದು ಬಹುಶಃ ಇದು ಈ ಸಭೆಯ ಮುಂದಿನ ಕೆಲಸಕಾರ್ಯಗಳಿಗೆ ಅನುಕೂಲ ಆಗಬಹುದು ಎನ್ನತಕ್ಕ ದೃಷ್ಟಿಯಿಂದ ನಿಮಗೆ ಅವಕಾಶವನ್ನು ಕೊಟ್ಟೆ. ಯಾರು ಅನ್ಯಥಾ ಭಾವಿಸಬಾರದೆಂದು ತಮಗೆ ತಿಳಿಸುತ್ತೇನೆ.

ಅಧ್ಯಕ್ಷರ ಅಪ್ಪಣೆಕೋರಿ ಪ್ರಸ್ತಾಪಿಸಲಾದ ವಿಷಯ

ಪ್ರಶ್ನೋತ್ತರ ಕಾಲದ ಬಗ್ಗೆ.

+ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ತಾವು ನಿಯಮದ ಪ್ರಕಾರ ಸಭೆ ನಡೆಯಬೇಕು ಎನ್ನುವುದರಲ್ಲಿ ನಮ್ಮ ಯಾರದೂ ಈ ಸಭೆಯಲ್ಲಿ ವಿರೋಧ ಇಲ್ಲವೇ ಇಲ್ಲ. ನಿಮಗೆ ಅಗೌರವವನ್ನು ಸೂಚಿಸಬೇಕೆಂಬ ಉದ್ದೇಶವೂ ಈ ಸಭೆಯಲ್ಲಿ ನಮಗೆ ಯಾರಿಗೂ ಇಲ್ಲ. ಇಲ್ಲಿ ಈ ಸಭೆ ಅಂದಮೇಲೆ ನಾವು ಇಲ್ಲಿಗೆ ಶಾಸಕರಾಗಿ ಬಂದಿರುವಾಗ ಅನೇಕ ವಿಚಾರಗಳನ್ನು ಚರ್ಚೆ ಮಾಡಬೇಕಾಗುತ್ತದೆ. ಸಭೆಯ ಗಮನಕ್ಕೂ ತರಬೇಕಾಗುತ್ತದೆ. ಅನೇಕ ಸಾರಿ ನಿಯಮಗಳ ಪ್ರಕಾರ ಇಲ್ಲದೆ ಗಂಟೆಗಟ್ಟಲೆ ಧರಣ ಮಾಡುತ್ತೇವೆ. ಸಭಾತ್ಯಾಗ ಮಾಡುತ್ತೇವೆ. ಅದು ನಿಯಮದಲ್ಲಿ ಇರುವುದಿಲ್ಲ. ಇಂತಹವು ಬರುತ್ತವೆ. ಆದರೆ ತಮ್ಮಲ್ಲಿ ನಾವು ಅರಿಕೆ ಮಾಡಿಕೊಳ್ಳುವುದೇನೆಂದರೆ, ನಮ್ಮ ಆತುರ ಮತ್ತು ದುಗುಡವಾದಂತಹ ವಿಚಾರಗಳನ್ನು ಹೇಳಬೇಕಾದಾಗ ಸಮಯವನ್ನು ತೆಗೆದುಕೊಳ್ಳುತ್ತದೆ.

ತಮಗೆ ಬೇಸರವಾಗುವ ಸಂದರ್ಭ ಬಂದರೂ ಸಹ, ನಮಗೆ ಈ ಸಭೆಯಲ್ಲಿ ಅನೇಕ ವಿಚಾರಗಳನ್ನು ಬಹಿರಂಗಪಡಿಸಬೇಕು, ಚರ್ಚೆ ಮಾಡಬೇಕೆಂಬ ಉದ್ದೇಶ ಇರುತ್ತದೆ. ತಾವು ನಿಯಮಾವಳಿಗಳನ್ನು ಬಿಟ್ಟು ಈ ಸಭೆಯನ್ನು ನಡೆಸಬೇಕೆನ್ನುವ ಉದ್ದೇಶವಾಗಲೀ ಅಥವಾ ತಮ್ಮ ಮನಸ್ಸಿಗೆ ನೋವನ್ನು ಉಂಟುಮಾಡಬೇಕೆನ್ನುವ ಉದ್ದೇಶವಾಗಲಿ ಈ ಸಭೆಯಲ್ಲಿ ನಮಗೆ ಯಾರಿಗೂ ಇಲ್ಲ. ನಿಯಮಾವಳಿಗಳ ಪ್ರಕಾರ ಅನೇಕ ವಿಚಾರಗಳನ್ನು ತಮ್ಮ ಗಮನಕ್ಕೆ ತರುವಾಗ ಕಾಲ ಬಹಳ ಜಾಸ್ತಿಯೂ ಹೋಗುತ್ತದೆ. ಇದೊಂದೇ ಸಾರಿ ಈ ರೀತಿ ನಡೆದಿಲ್ಲ. ಸಾಮಾನ್ಯವಾಗಿ ಪ್ರಜಾಪ್ರಭುತ್ವದಲ್ಲಿ ಇಂತಹ ವಿಚಾರ ಶಾಸನಸಭೆಗಳಲ್ಲಿ ಮತ್ತು ಪಾರ್ಲಿಮೆಂಟಿನಲ್ಲೂ ಸಹ ನಡೆಯುತ್ತಿರುತ್ತದೆ. ಪ್ರಶ್ನೋತ್ತರ ಕಾಲದಲ್ಲಿ ಸುಮಾರು ಹತ್ತು ಪ್ರಶ್ನೆಗಳು ಬಂದಾಗ ಅನೇಕ ಪ್ರಶ್ನೆಗಳು ಉಳಿದುಹೋಗುತ್ತವೆ. ಇದಕ್ಕೆ ನನಗೆ ಏನು ಅನ್ನಿಸುತ್ತದೆ ಎಂದರೆ, ಎಲ್ಲಾ ಪ್ರಶ್ನೆಗಳಿಗೂ ಅವಕಾಶ ಕೊಡತಕ್ಕಂಥ ರೀತಿಯಲ್ಲಿ ನಿಯಮವನ್ನು ಬದಲಾವಣೆ ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ಈಗ ಪ್ರಶ್ನೋತ್ತರ ಕಾಲ ಒಂದು ಗಂಟೆ ಇದೆ. ತಾವು ಇನ್ನೂ ಅರ್ಧ ಗಂಟೆ ಹೆಚ್ಚಾಗಿ ಕೊಟ್ಟರೆ ಸಂತೋಷ ಹಾಗೂ ಎಲ್ಲರಿಗೂ ಅನುಕೂಲವಾಗುತ್ತದೆ, ಅವಕಾಶ ಸಿಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಪ್ರತಿಸಾರಿಯೂ ಪ್ರಶ್ನೆಗಳು ಬಿಟ್ಟುಹೋಗತಕ್ಕಂಥದ್ದು ನಡೆಯುತ್ತಿದೆ. ಕೆಲವು ಪ್ರಮುಖವಾದ ಪ್ರಶ್ನೆಗಳಿಗೆ ಸುದೀರ್ಘವಾದಂತಹ ಉಪ ಪ್ರಶ್ನೆಗಳನ್ನು ಇಡೀ ಸದನವೇ ಕೇಳತಕ್ಕಂಥ ಸಂದರ್ಭ ಬಂದಾಗ ತಾವು ಅವಕಾಶವನ್ನು ಕೊಟ್ಟಿದ್ದೀರಿ. ತಾವಂತೂ ಆ ಪೀಠಕ್ಕೆ ಬಹಳ ಅತ್ಯಂತ, ಉನ್ನತವಾದಂತಹ ಗೌರವವನ್ನು ತಂದು ಕೊಟ್ಟಿದ್ದೀರಿ. ಬಹಳ

ಎತ್ತರವಾದಂತಹ ಗೌರವವನ್ನು ತಂದಿದ್ದೀರಿ. ಈ ರಾಜ್ಯದಲ್ಲಿದ್ದಂತಹ ಅಧ್ಯಕ್ಷರ ಪೈಕಿ ತಾವು ಒಬ್ಬರು ಉನ್ನತವಾದಂತಹ ಶೇಷ್ಮ ಮಟ್ಟವನ್ನು ಕಾಪಾಡಿದ್ದೀರಿ.

ಅದರ ಬಗ್ಗೆ ನಮ್ಮ ಅಪಾರ ಮೆಚ್ಚುಗೆ ಮತ್ತು ಗೌರವ ಇದೆ. ಮತ್ತೊಂದು ವಿಷಯವೆಂದರೆ, ತಾವು ಈ ಸದನದಲ್ಲಿ 'ನಿವೃತ್ತಿ' ಎನ್ನತಕ್ಕಂಥ ಮಾತನ್ನು ಎಂದೂ ಆಡಬಾರದು. ಏಕೆಂದರೆ, ಈ ಮನೆಯ ಸದಸ್ಯನಾಗಿ ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ತಾವು 'ನಿವೃತ್ತಿ' ಎಂದು ಹೇಳಿದಾಗ ಅದನ್ನು ಕೇಳಿ ನಮಗೆಲ್ಲಾ ಬಹಳ ನೋವುಂಟಾಯಿತು. ತಾವು ಈ ಸದನದಲ್ಲಿ ಎರಡು ವರ್ಷಗಳ ಕಾಲ ಅಧ್ಯಕ್ಷರಾಗಿ ನಡೆದುಕೊಂಡಂಥ ರೀತಿ-ನೀತಿಗಳು ಭವ್ಯವಾದುದು ಎಂದು ನಾವೆಲ್ಲರೂ ಮುಕ್ತಕಂಠದಿಂದ ಹೇಳುತ್ತಿದ್ದೇವೆ. ತಾವು ಈ ಸಭೆಗೆ ಯಾವುದೇ ರೀತಿಯ ಪಕ್ಷಪಾತವಿಲ್ಲದೆ ಗೌರವ ಕೊಟ್ಟಿದ್ದೀರಿ. ಆದರೂ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ತಾವು ಪ್ರಶ್ನೋತ್ತರ ಕಾಲದ ಅವಧಿಯನ್ನು ಜಾಸ್ತಿ ಮಾಡಲೇಬೇಕಾಗುತ್ತದೆ ಮತ್ತು ಅನೇಕ ಸಂದರ್ಭಗಳಲ್ಲಿ ಹಲವಾರು ವಿಷಯಗಳ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬೇಕಾಗಿರುವುದರಿಂದ ಅದರ ಬಗ್ಗೆಯೂ ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಅಲ್ಲದೆ, ದಿನಗಟ್ಟಳೆ ಕಾಲವನ್ನು ತೆಗೆದುಕೊಳ್ಳುವಂಥ ಪ್ರಶ್ನೆಗಳು ಬರುತ್ತವೆ. ನಿಯಮವನ್ನು ಮೀರಿ ಕಾಲ ಮುಂದಕ್ಕೆ ಹೋಗುವುದರಿಂದ, ಅಂತಹ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ನನ್ನ ಒಂದು ಮನವಿಯನ್ನು ತಾವು ಸ್ವೀಕಾರ ಮಾಡಬೇಕು. ತಾವು ನಿಯಮಾವಳಿ ಸಮಿತಿಯನ್ನು ಕರೆದು, ಅದರಲ್ಲಿ ತಿದ್ದುಪಡಿ ಮಾಡಿ, ಸಾಧ್ಯವಾದರೆ ಪ್ರಶ್ನೋತ್ತರ ಕಾಲವನ್ನು ಜಾಸ್ತಿ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಅಲ್ಲದೇ, ಶೂನ್ಯ ವೇಳೆಯಲ್ಲಿ ಬಹಳ ಪ್ರಮುಖವಾಗಿರತಕ್ಕಂಥ ವಿಷಯಗಳನ್ನು ಪ್ರಸ್ತಾಪಿಸುವುದನ್ನು ತಾವು ತಪ್ಪಿಸುವುದಕ್ಕಾಗುವುದಿಲ್ಲ, ಆ ನಿಯಮ ಲೋಕಸಭೆಯಲ್ಲೂ ಸಹ ಇದೆ. ಶೂನ್ಯ ವೇಳೆಯಲ್ಲಿ ಬರತಕ್ಕಂಥ ಅನೇಕ ವಿಚಾರಗಳು ಈ ರಾಜ್ಯಕ್ಕೆ, ರಾಜ್ಯದ ಜನತೆಗೆ ಸಂಬಂಧಪಟ್ಟದ್ದಾಗಿರುತ್ತದೆ. ಅದನ್ನು ತಮ್ಮ ಮೂಲಕವೇ ಸದನದಲ್ಲಿ ತರಬೇಕಾಗಿರುತ್ತದೆ. ಆದುದರಿಂದ, ದಯಮಾಡಿ, ಅಂತಹ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೆಚ್ಚು ಅವಧಿಯನ್ನು ಕೊಡುವುದಕ್ಕೆ ತಾವು ಮನಸ್ಸು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸದನದಲ್ಲಿ ತಮ್ಮನ್ನು ಕುರಿತು ಯಾರು ಪ್ರಸ್ತಾಪ ಮಾಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಅಂತಹ ಸಂದರ್ಭ ಇದುವರೆವಿಗೂ ಕೂಡ ಉದ್ಭವವಾಗಿಲ್ಲ. ನಾವೇನಾದರೂ ಮಾತನಾಡುವಾಗ ಕೋಪ, ತಾಪ ತೋರಿಸಬೇಕಿದ್ದರೆ ಅದು ಸರ್ಕಾರದ ಮೇಲೆ, ಸರ್ಕಾರದ ವಿರುದ್ಧವೇ ಹೊರತು ತಾವು ಕುಳಿತಿರತಕ್ಕಂಥ ಆಸನಕ್ಕಾಗಲಿ, ತಮಗಾಗಲಿ ಖಂಡಿತ ಅಲ್ಲ. ಅದು ಸಂಸದೀಯ ವ್ಯವಹಾರವೂ ಅಲ್ಲ. ತಾವು ಅಧ್ಯಕ್ಷರಾಗಿ ತಮ್ಮ ಸ್ಥಾನಕ್ಕೆ ಹೆಚ್ಚಿನ ಗೌರವವನ್ನು ಕೊಡಬೇಕೆನ್ನುವಂಥ ಆಸೆಯಿಂದ ಕೆಲಸ ಮಾಡಿದ್ದೀರಿ ಮತ್ತು ಇಚ್ಛಾರಿಕೆಯಿಂದ ನಿರ್ವಹಿಸುತ್ತಿದ್ದೀರಿ. ಆದರೆ, ನಮ್ಮಲ್ಲಿರತಕ್ಕಂಥ ಕೊರತೆ ಏನೆಂದರೆ, ನೀವು ನಿಮ್ಮ ಸ್ಥಾನವನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗೀದ್ದೀರಿ ಮತ್ತು ಆ ಸ್ಥಾನದಲ್ಲಿ ಎತ್ತರಕ್ಕೂ ಬೆಳೆದಿದ್ದೀರಿ. ಆ ಎತ್ತರಕ್ಕೆ ಬೆಳೆಯತಕ್ಕಂಥ ಸ್ಪಂದಿಸತಕ್ಕಂಥ, ಕೆಲಸಕ್ಕೆ ಆದರಲ್ಲೂ ನಾವುಗಳು ಹೆಚ್ಚಿನ ರೀತಿಯಲ್ಲಿ

ಸಹಕಾರಿಯಾಗಲಿಲ್ಲ. ಎನ್ನತಕ್ಕಂಥ ಕೊರತೆ ನಮ್ಮಲ್ಲೂ ಇದೆ. ಇದೆ. ಅದಕ್ಕೆ ಕಾರಣ ವೈಯಕ್ತಿಕವಾಗಿ ಖಂಡಿತ ಅಲ್ಲ. ಸಾರ್ವಜನಿಕವಾದ ಸಮಸ್ಯೆಗಳು, ರಾಜ್ಯದ ಸಮಸ್ಯೆಗಳು, ಜನತೆಯ ಸಮಸ್ಯೆಗಳು ಬಂದಾಗ ಅವುಗಳನ್ನು ನಾವು ಪ್ರಸ್ತಾಪ ಮಾಡಿ ತಾವು ಏರಿರತಕ್ಕಂಥ ಮಟ್ಟವನ್ನು ನಾವು ತಲುಪುವುದಕ್ಕಾಗುತ್ತಿಲ್ಲ. ಎನ್ನುವುದೇ ನಮಗೂ ಅನೇಕ ಸಂದರ್ಭಗಳಲ್ಲಿ ಭಾಸವಾಗಿದೆ. ಆದುದರಿಂದ, ಇಲ್ಲಿ ನಡೆದಿರತಕ್ಕಂಥ ಸಣ್ಣ-ಪುಟ್ಟ ಘಟನೆಗಳು ತಮ್ಮನ್ನು ಕುರಿತದ್ದಲ್ಲವೆಂಬ ಮಾತನ್ನು ತಾವು ಮನಗಂಡು ತಮ್ಮ ಮನಸ್ಸಿಗೆ ಬೇಜಾರಾಗಿದ್ದಲ್ಲಿ, ಅದನ್ನು ಮರೆಯಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಪ್ರಶ್ನೋತ್ತರ ಸಂದರ್ಭದಲ್ಲಿ ನಡೆದಂಥ ಘಟನೆಯ ಹಿನ್ನೆಲೆಯಲ್ಲಿ ಒಂದು ರೀತಿಯಾದ ಬಿಗಿ ವಾತಾವರಣ ನಿರ್ಮಾಣವಾಗಿ ಸಭೆಯನ್ನು ತಾವು ಎರಡು ಗಂಟೆಗಳ ಕಾಲ ಮುಂದಕ್ಕೆ ಹಾಕಿದ್ದೀರಿ. ಕಳೆದ ಎರಡು ವರ್ಷಗಳಲ್ಲಿ ತಾವು ಅಧ್ಯಕ್ಷರಾದ ನಂತರ ನಮಗೆಲ್ಲರಿಗೂ ಸಮಯ ಕೊಡುವುದಷ್ಟೇ ಅಲ್ಲ, ಎಲ್ಲಾ ರೀತಿಯಲ್ಲೂ ಸಭೆಯನ್ನು ಚೆನ್ನಾಗಿ ನಡೆಸಿಕೊಂಡು ಬಂದಿದ್ದೀರಿ. ಅಲ್ಲದೆ, ಸರ್ಕಾರ ತಪ್ಪು ಮಾಡಿದಂಥ ಸಂದರ್ಭದಲ್ಲೂ ಸಹ, ಸರ್ಕಾರ ಉತ್ತರ ಕೊಡುವ ವಿಚಾರದಲ್ಲಾಗಲಿ ಅಥವಾ ಕೆಲಸ ಮಾಡತಕ್ಕಂಥ ವಿಚಾರದಲ್ಲಾಗಲಿ ತಮ್ಮ ಇತಿ-ಮಿತಿಯಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ಕೆಲಸ ಮಾಡಿದ್ದೀರಿ. ತಮ್ಮ ಬಗ್ಗೆ ಸದನದಲ್ಲಿರುವ ಎಲ್ಲಾ ಸದಸ್ಯರಿಗೂ ಅತ್ಯಂತ ಗೌರವವಿದೆ. ಇವೊತ್ತಿನ ದಿವಸ ಪ್ರಶ್ನೋತ್ತರ ಕಾಲದಲ್ಲಿ ನಡೆದಂಥ ಘಟನೆಯಲ್ಲಿ ಮಾನ್ಯ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರ ಮತ್ತು ಶ್ರೀ ಬಸವರಾಜ ಪಾಟೀಲ್ ಅಟ್ಟೂರ್‌ರವರ ಕ್ಷೇತ್ರದಲ್ಲಿ ಬರಗಾಲ ಪರಿಸ್ಥಿತಿ ತೀವ್ರವಾಗಿರುವುದರಿಂದ, ಆ ಒಂದು ವಿಚಾರವನ್ನು ಸದನದಲ್ಲಿ ಮಂಡನೆ ಮಾಡಬೇಕೆನ್ನುವ ದೃಷ್ಟಿಯಿಂದ ಪ್ರಸ್ತಾಪ ಮಾಡುವಾಗ ಆ ಸಂದರ್ಭದಲ್ಲಿ ಶ್ರೀ ಬನ್ನಿಕೋಡ್‌ರವರು 'ನನ್ನ ಪ್ರಶ್ನೆ ನಿನ್ನೆಯೂ ಬಂದಿಲ್ಲ, ಇಂದೂ ಬಂದಿಲ್ಲ' ಎಂದು ದುಗುಡದಿಂದ ಕೆಲವು ಮಾತುಗಳನ್ನು ಹೇಳಿದರು. ಅದರ ಹಿನ್ನೆಲೆಯಲ್ಲಿ 'ನಿನ್ನೆ ಮೊನ್ನೆ ತರಹ ಸದನ ನಡೆದುಕೊಂಡು ಹೊರಟರೆ ಸದನವನ್ನು ಕಾನೂನಿನ ಇತಿ-ಮಿತಿಯೊಳಗೆ ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತದೆ' ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ ಮತ್ತು 'ನಿವೃತ್ತಿ' ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ನಾವು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವುಗಳು ತಮಗೆ ಭರವಸೆ ಕೊಡುತ್ತೇವೆ.

ನಾವು ತಾವು ಹೇಳತಕ್ಕ ಇತಿಮಿತಿಯೊಳಗೆ ನಿಯಮಾನುಸಾರವಾಗಿ ನಡೆದುಕೊಳ್ಳುತ್ತೇವೆನ್ನತಕ್ಕ ಭರವಸೆಯನ್ನು ಕೊಡುತ್ತೇವೆ. ಸರ್ಕಾರವು . ತಪ್ಪು ಮಾಡಿದೆಯೆಂದು ನಮಗೆ ಅನ್ನಿಸಿದಾಗ ನಾವು ಸಾಕಷ್ಟು ಆಪಾದನೆಯನ್ನು ಮಾಡಿದ್ದೇವೆ, ಧರಣಿಮಾಡಿದ್ದೇವೆ ಎಲ್ಲಾರೀತಿಯ ಪ್ರತಿಭಟನೆಯನ್ನು ಮಾಡಿದ್ದೇವೆ ತಾವು ಅದಕ್ಕೆ ಅನೇಕ ಸಂದರ್ಭಗಳಲ್ಲಿ ಅವಕಾಶವನ್ನು ಸಹ ಮಾಡಿಕೊಟ್ಟಿದ್ದೀರಿ. ಆದರೆ ನಾವು ಯಾವುತ್ತೂ ಸಹ ಸರ್ಕಾರ ಮಾಡಿದಂಥ ತಪ್ಪನ್ನು ತಾವು ಮುಚ್ಚಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದೀರಿ ಎನ್ನತಕ್ಕಂಥ ಮಾತನ್ನು ಹೇಳಿಲ್ಲ, ಅದಷ್ಟೇ ಅಲ್ಲ, ತಾವು ನಮಗೆ ಅವಕಾಶವನ್ನು ಕೊಟ್ಟಿದ್ದೀರೆಂದು ಹೇಳಿದ್ದೇವೆ. ತಮ್ಮ ಮೇಲೆ ಕೋಪತಾಪಗಳು ಯಾರಿಗೂ ಕೂಡ ಇರುವುದಿಲ್ಲ. ಅದು ಸರ್ಕಾರದ ಮೇಲೆ ಇರತಕ್ಕದ್ದು. ಆದರೆ ನಿಯಮದ ಪ್ರಕಾರ ನಿಮ್ಮ ಮೂಲಕವಾಗಿ ನಾವು ಸರ್ಕಾರದ ಬಗ್ಗೆ ಟೀಕೆ ಮಾಡಬೇಕಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ನಾವು ಕೋಪ ಮತ್ತು ಪರಿಸ್ಥಿತಿಯ

ಹಿನ್ನೆಲೆಯಲ್ಲಿರತಕ್ಕಂಥ ಸಮಸ್ಯೆಯ ಒಂದು ಎತ್ತರವನ್ನು ತಿಳಿದುಕೊಂಡು ಆ ರೀತಿ ಸ್ವಲ್ಪ ಜೋರಾಗಿ ಮಾತನಾಡಬೇಕಾಗುತ್ತದೆ. ಇದು ತಮಗೆಲ್ಲಾ ಗೊತ್ತಿದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ, ತಾವು ಯಾವುದೇ ರೀತಿಯ ನೋವನ್ನು ಮನಸ್ಸಿಗೆ ಮಾಡಿಕೊಳ್ಳದ ರೀತಿಯಲ್ಲಿ ಈ ಸಭೆಯನ್ನು ನಡೆಸಲು ನಿಮಗೆ ಎಲ್ಲಾ ರೀತಿಯ ಸಹಕಾರವನ್ನು ಕೊಡುತ್ತೇವೆ. ನಮಗೆ ಅನೇಕ ಸಂದರ್ಭಗಳಲ್ಲಿ ಏನೆನಿಸುತ್ತದೆಂದರೆ, ಇಲ್ಲಿ ನಮ್ಮ ಪ್ರಶ್ನೆ ಬರುತ್ತದೆ, ನಮಗೆ ಒಂದು ಅವಕಾಶ ಸಿಕ್ಕೀತು ಎಂಬ ಕಾತುರದಿಂದ ಇರುತ್ತೇವೆ. ಆಯಾಯ ಕ್ಷೇತ್ರದಲ್ಲಿರತಕ್ಕ ಸದಸ್ಯರಿಗೆ ಅವರ ಕ್ಷೇತ್ರದ ಸಮಸ್ಯೆ ಇರುತ್ತದೆ. ಅದನ್ನು ನಾವು ಪ್ರತಿಬಿಂಬಿಸಲು ಆಗಿಲ್ಲವೆನ್ನತಕ್ಕ ಭಾವನೆ ಇರುತ್ತದೆ. ನಿಯಮಾವಳಿಯನ್ನು ರಚನೆ ಮಾಡಲು ತಾವು ಒಂದು ಸಮಿತಿಯನ್ನು ಮಾಡಿದ್ದೀರಿ. ಇದರ ಬಗ್ಗೆ ಆ ಸಮಿತಿಯ ಸಭೆಯನ್ನು ಕರೆದು ಇದಕ್ಕೆ ಏನಾದರೂ ಒಂದು ಅವಕಾಶವಿದ್ದರೆ ತಾವು ಪರಾಮರ್ಶಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಂಡು, ತಮ್ಮ ಮನಸ್ಸಿಗೆ ನೋವುಮಾಡಿಕೊಳ್ಳಬಾರದೆಂದು ವಿನಂತಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೆ, ಬಹುಶಃ 6-7 ವರ್ಷಗಳಿಂದ ನಾನು ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಎಲ್ಲರಿಗೂ ಸರಿಸಮಾನವಾದಂಥ ರೀತಿಯಲ್ಲಿ ಇಲ್ಲಿ ಕೆಲಸ ಮಾಡಲು ತಮ್ಮ ಕಾಲದಲ್ಲಿ ತುಂಬಾ ಅನುಕೂಲವಾಗಿದೆ. ಎಲ್ಲರಿಗೂ ಸರಿಯಾದ ರೀತಿಯಲ್ಲಿ ಅವಕಾಶ ಸಿಗುತ್ತದೆ. ವಿಶೇಷವಾದಂಥ ಸಂದರ್ಭದಲ್ಲಿ ಈ ರೀತಿಯ ಪ್ರಸಂಗಗಳು ಬಂದಾಗ ನಿಜಕ್ಕೂ ನಮ್ಮ ಮನಸ್ಸಿಗೆ ತುಂಬಾ ಖೇದವಾಯಿತು. ಆ ರೀತಿಯ ಘಟನೆ ಆಗದಂತೆ ತಮಗೆ ಸಹಕಾರವನ್ನು ಕೊಟ್ಟು ಈ ಸದನದ ಕಾರ್ಯಕಲಾಪಗಳು ಆಗಬೇಕೆನ್ನುವುದು ನಮ್ಮೆಲ್ಲರ ಇಚ್ಛೆ. ಮತ್ತೆ ಯಾವುದೇ ಸಂದರ್ಭದಲ್ಲಿಯೂ ಸಹ ಹೌಸ್‌ನ ಅನುಮತಿಯನ್ನು ತೆಗೆದುಕೊಂಡು ತಾವು ಕಾರ್ಯಕಲಾಪದ ಬದಲಾವಣೆಗೆ ಅವಕಾಶವನ್ನು ಕೊಡಲು ನಮ್ಮ ನಿಯಮಾವಳಿಯಲ್ಲಿ ಅವಕಾಶವಿದೆ. ಅನೇಕ ಸಂದರ್ಭಗಳಲ್ಲಿ ನಿಯಮಾವಳಿಯಲ್ಲಿ ಪ್ರಶ್ನೋತ್ತರಗಳಿಗೆ ಇರುವ ಒಂದು ಗಂಟೆಯ ಅವಧಿಯನ್ನು ಬಹುಶಃ ಹೆಚ್ಚು ಮಾಡಲು ಸಾಧ್ಯವಾಗದಿದ್ದರೂ ಸಹ ತಾವು ಒಂದು ಅವಕಾಶವನ್ನು ಕೊಟ್ಟು ಸುಮಾರು ಒಂದೂವರೆ ಅಥವಾ ಎರಡುಗಂಟೆ ಅವಕಾಶವನ್ನು ವಿಶೇಷವಾದಂಥ ಪ್ರಶ್ನೆಗಳಿಗೆ ಮಾಡಿಕೊಡುತ್ತಿದ್ದೀರಿ. ಆ ಒಂದು ಚೌಕಟ್ಟಿನಲ್ಲಿ ನಾವು ಕೆಲಸ ಮಾಡಲು ಶಕ್ತಿ ಮೀರಿ ಪ್ರಯತ್ನ ಮಾಡುತ್ತೇವೆ ಮತ್ತು ನಮ್ಮ ಸಹಕಾರ ಸದಾ ಇರುತ್ತದೆ. ನಾವು ನಿಮ್ಮ ಜೊತೆ ಇದ್ದೇವೆ ಇವತ್ತು ಆದಂಥ ಘಟನೆಗೆ ವಿಷಾದವನ್ನು ವ್ಯಕ್ತಪಡಿಸುತ್ತಾ ಈ ಸದನದ ಕೆಲಸಕಾರ್ಯಗಳು ಸುಗಮವಾಗಿ ನಡೆದುಕೊಂಡು ಹೋಗಲು ತಾವು ಬಂದು ಮತ್ತೆ ಕಾರ್ಯಕಲಾಪಗಳನ್ನು ಪ್ರಾರಂಭ ಮಾಡಿದ್ದೀರಿ, ಅದಕ್ಕಾಗಿ ತಮಗೆ ಧನ್ಯವಾದಗಳು.

+ ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಹಿರಿಯರು ಈಗಾಗಲೆ ಈ ವಿಷಯದ ಬಗ್ಗೆ ವಿಚಾರವನ್ನು ಎತ್ತಿದ್ದಾರೆ. ಇದನ್ನು ಹೇಳಲು ಕಾರಣವೇನೆಂದರೆ, ಇವತ್ತು ಇದ್ದಂಥ ಪ್ರಶ್ನೆ ಸಮಗ್ರ ರಾಜ್ಯದ ಸಮಸ್ಯೆಯಾಗಿತ್ತು. ನಾವು ಹೋದವರ್ಷದ ಆಯುವ್ಯಯದಲ್ಲಿ 2 ಕೋಟಿ 36 ಲಕ್ಷ ರೂಪಾಯಿಗಳನ್ನು ಪಶು ವೈದ್ಯಾಲಯಗಳಲ್ಲಿ ಔಷಧಿಯನ್ನು ಕೊಳ್ಳಲು ಈ ಸಭೆಯಲ್ಲಿ ಮಂಜೂರು ಮಾಡಿಕೊಟ್ಟಿದ್ದವು. ಇಲ್ಲಿಯವರೆಗೂ ಆ ಔಷಧಿಗಳನ್ನು ಕೊಳ್ಳಲಿಲ್ಲ ಮತ್ತು ಪೂರೈಕೆಯನ್ನೂ ಸಹ ಮಾಡಿಲ್ಲ. ಇದು ಸಮೀಪಯೋಗವನ್ನು

ಜನತೆ ಪಷ್ಟೆದುಕೊಳ್ಳಲಿಲ್ಲ, ಅದರಯೂ ನಮ್ಮ ಹಳ್ಳಿಗಾಡಿನ ರೈತರಿಗೆ ಇದರಿಂದ ಬಹಳ ತೊಂದರೆಯಾಗಿದೆ. ಇದರಿಂದಾಗಿ ಬೆಲೆಯುಳ್ಳ ಹಸುಗಳು, ಕಿಮ್ಮತ್ತಿನ ಹೋರಿಗಳು ಸತ್ತುಹೋಗಿದೆ. ಪಶುಸಂಪತ್ತು, ರೈತರ ಸಂಪತ್ತು ನಾಶವಾಗಿದೆ. ಒಂದೇ ದಿನದಲ್ಲಿ ನನ್ನ ಕ್ಷೇತ್ರದಲ್ಲಿ ಅದೆಂಥ ರೋಗವೋ ಬಂದು ಅದಕ್ಕೆ ಔಷಧಿಯೇ ಸಿಗಲಿಲ್ಲ. ಒಂದೇ ದಿನದಲ್ಲಿ 2-3 ಗ್ರಾಮಗಳಲ್ಲಿ ಬೆಲೆಬಾಳತಕ್ಕ ನೂರಾರು ಪಶುಗಳು ಸತ್ತು ಹೋದವು. ಒಂದು ಗ್ರಾಮದಲ್ಲಿ 40-50 ಇನ್ನೊಂದು ಗ್ರಾಮದಲ್ಲಿ 30-40 ಪಶುಗಳು ಹೀಗಾದವು. ಏಕಾಏಕಿ ಹೀಗಾಯಿತು. ಆ ಸ್ಥಿತಿಯಲ್ಲಿ ಔಷಧಿಯನ್ನು ತರಲು ಆಸ್ಪತ್ರೆಗೆ ಹೋಗಲು ಅವಕಾಶ ಸಿಗಲಿಲ್ಲ. ಅಥವಾ ಹೋಗಿ ಕೇಳಲು ಅವಕಾಶವಿದ್ದು, ಕೇಳಿದರೂ ಔಷಧಿ ಸಿಗಲಿಲ್ಲ, ಆಗ ನಾನು ತಾಲ್ಲೂಕು ಅಭಿವೃದ್ಧಿ ಸಮಿತಿಯಲ್ಲಿದೆ. ಸರ್ಕಾರದ ಜೊತೆ ವಿಚಾರಮಾಡಿದಾಗ ಆಯವ್ಯಯದಲ್ಲಿ ಒದಗಿಸಿದ್ದ ಹಣವನ್ನು ಸಂಬಂಧಪಟ್ಟ ಇಲಾಖೆಯವರು, ಸರ್ಕಾರದವರು ಔಷಧಿಯನ್ನು ಕೊಳ್ಳಲು ಉಪಯೋಗಿಸಿಲ್ಲವೆಂದು ಗೊತ್ತಾಯಿತು. ಆ ಉದ್ದೇಶವನ್ನು ಇಟ್ಟುಕೊಂಡು ನಾನು ಈ ಪ್ರಶ್ನೆಯನ್ನು ಹಾಕಿದ್ದೆ. ಇಡೀ ರಾಜ್ಯದಲ್ಲಿ ಈ ಇಲಾಖೆಯು ನಿರ್ಲಕ್ಷತನವಿಲ್ಲದೆ ಸಂಬಂಧಪಟ್ಟವರು ಜವಾಬ್ದಾರಿಯಿಂದ ಹಣವನ್ನು ಸದುಪಯೋಗ ಮಾಡಿ ಔಷಧಿಯನ್ನು ಪೂರೈಕೆ ಮಾಡಿಸಿದ್ದಲ್ಲಿ ಇದು ಆಗುತ್ತಿರಲಿಲ್ಲವೆಂದು ತಿಳಿದುಕೊಂಡು ನಾನು ಈ ಪ್ರಶ್ನೆ ಹಾಕಿದ್ದೆ. ಅದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಈಗಲಾದರೂ ಅದಕ್ಕೆ ಏನಾದರು ಒಂದು ಉಪಾಯ ಒದಗಿಸಲು ಸಾಧ್ಯವೆ?

ನಿನ್ನೆ ದಿನ ಅನಧಿಕೃತ ಪ್ರೌಢಶಾಲೆಗಳ ಬಗ್ಗೆ ರಾಜ್ಯದ ಹಿತದೃಷ್ಟಿಯಿಂದ ಪ್ರಶ್ನೆ ಇತ್ತು, ಆದರೆ ಅದು ಬರಲಿಲ್ಲ. ಮೊನ್ನೆ ದಿನ ಅಂದರೆ ದಿನಾಂಕ 24ರಂದು ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ ಪ್ರಶ್ನೆ ಇತ್ತು. ನಾನು ಬಹುತೇಕ ಶಾಸಕನಾಗುವ ಪೂರ್ವದಲ್ಲಿ ಮತ್ತು ಶಾಸಕನಾದಮೇಲೂ ಕೂಡ 5-6 ತಾಲ್ಲೂಕುಗಳಿಗೆ ಉಪಯೋಗವಾಗತಕ್ಕ ತುಂಗಾಮೇಲ್ದಂಡೆ ಯೋಜನೆ ಸಲುವಾಗಿ ಹೋರಾಟ ಮಾಡತಕ್ಕದ್ದಕ್ಕೆ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ. ಆ ಯೋಜನೆಯ ಒಂದು ಕಾರ್ಯ ಪ್ರಾರಂಭವಾಗಿಲ್ಲವೆಂದು ಹಾಕಿದ್ದಾರೆ. ಆ ಪ್ರಶ್ನೆ ಅನಿವಾರ್ಯವಾಗಿ ಮಾನ್ಯ ಹಿರಿಯ ನಾಯಕರಾದ ಶ್ರೀಮಾನ್ ಕೆ.ಹೆಚ್.ಪಾಟೀಲರ ನಿಧನದ ಸಂತಾಪಸೂಚನೆಯಿಂದ ಮುಂದಕ್ಕೆ ಹೋಯಿತು. ಆದುದರಿಂದ ಏನಾದರೂ ಮಾಡಿ ಅದಕ್ಕೆ ಸಮಯವನ್ನು ಒದಗಿಸಿಕೊಡಬೇಕೆಂದು ತಮ್ಮನ್ನು ಕೇಳುವುದರೊಂದಿಗೆ ಈ ಸದನದ ಮಾನ್ಯ ಸ್ನೇಹಿತರನ್ನು, ಹಿರಿಯ ಸದಸ್ಯರನ್ನು ವಿನಂತಿಸಿಕೊಂಡಿದ್ದೇನೆ. ಇದರಲ್ಲಿ ನಾನು ವೈಯಕ್ತಿಕವಾಗಿ ಅಥವಾ ಯಾವುದೇ ಸ್ನೇಹಿತರ ಪರವಾಗಿ ಮಾಡಿಲ್ಲ, ಎಲ್ಲರಿಗೂ ಅವಕಾಶ ಸಿಗುವಂಥ ಒಂದು ಉಪಾಯವನ್ನು ತಾವು ಕಂಡುಹಿಡಿದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ವಿನಂತಿಸಿಕೊಂಡಿದ್ದೆ. ಅದಕ್ಕೆ ತಾವು ಕಾನೂನಿನ ಚೌಕಟ್ಟಿನಲ್ಲಿ ಈ ಕೆಲಸವನ್ನು ಮಾಡಲು ಬಿಡಿ, ಇಲ್ಲದಿದ್ದರೆ ನಿವೃತ್ತಿಯಾಗುತ್ತೇನೆ ಎನ್ನುವಂಥ ಮಾತನ್ನು ಹೇಳಿದಿರಿ. ಇದರಿಂದ ನನಗೆ ಬಹಳ ಖೇದವಾಗಿದೆ.

ಏಕೆಂದರೆ ಮಾನ್ಯ ಅಧ್ಯಕ್ಷರಿಗಾಗಲಿ ಅಥವಾ ಬೇರೆ ಸ್ನೇಹಿತರಿಗಾಗಲಿ, ವ್ಯಕ್ತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು. ಗುರಿಯನ್ನು ಇಟ್ಟುಕೊಂಡು ಹೇಳಲಿಲ್ಲ, ಜನರ ಹಿತದೃಷ್ಟಿಯಿಂದ ನಾನು ಒಬ್ಬ ಶಾಸಕನಾಗಿ, ನನ್ನ ಕ್ಷೇತ್ರದಲ್ಲಿ ಆದಂತಹ ಒಂದು ಸಮಸ್ಯೆ ಇಡೀ ರಾಜ್ಯದಲ್ಲಿ ಆಗಿದೆಯೆಂದು ತಿಳಿದುಕೊಂಡು ಇದನ್ನು ಪ್ರಸ್ತಾಪಮಾಡಬೇಕೆಂಬ ಆತುರತೆಯಿಂದ ಕೇಳಿದೆನೇ ವಿನಃ ಬೇರೇನೂ ಇಲ್ಲ, ತಮಗಾಗಲಿ, ಬಹುತೇಕ ಸ್ನೇಹಿತರುಗಳಿಗಾಗಲಿ ನಾವು ಗೌರವವನ್ನು ಕೊಡಬೇಕು, ಕೊಡತಕ್ಕದು ನಮ್ಮ

ಆದ್ಯ ಕರ್ತವ್ಯವೆಂದು ತಿಳಿದುಕೊಂಡಿರುವವರಲ್ಲಿ ನಾನೂ ಒಬ್ಬ. ಅದನ್ನು ನಾನು ಪಾಲಿಸಿಕೊಂಡು ಬಂದಿದ್ದೇನೆ. ಅದಕ್ಕಾಗಿ ನಾನು ಇದನ್ನು ಕೇಳಿದಾಗ ತಾವು ಹೇಳಿದ್ದಕ್ಕೆ ಬಹಳ ನೋವಾಯಿತು. ಹಾಗಾದರೆ ನಾನು ಹೇಳಿದ್ದು ಏನಾದರೂ ಮಾನ್ಯ ಅಧ್ಯಕ್ಷರ ಮನಸ್ಸಿನ ಮೇಲೆ ಪರಿಣಾಮ ಆಯಿತೇನೋ ಎಂದು ನನ್ನ ಮನಸ್ಸಿಗೂ ನೋವಾಯಿತು. ನನಗೆ ವೈಯಕ್ತಿಕವಾಗಿ ಯಾರ ಮೇಲೂ ದ್ವೇಷವಿಲ್ಲ. ಈ ಸದನದಲ್ಲಿ ತಾವು ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡು ಈ ಕಲಾಪವನ್ನು ನಡೆಸುತ್ತೀರಿ. ಇದಕ್ಕಿಂತ ಚೆನ್ನಾಗಿ ನಡೆಸಲಿಕ್ಕೆ ಇನ್ನು ಉಳಿದವರಿಗೆ ಎಷ್ಟರಮಟ್ಟಿಗೆ ಸಾಧ್ಯ ಎನ್ನುವಂತಹ ಪ್ರಶ್ನೆ ತೀವ್ರವಾದಂಥಾದ್ದು. ತಮ್ಮಲ್ಲಿ ಇರತಕ್ಕಂತಹ ತಾಳ್ಮೆ ಬುದ್ಧಿಮತ್ತೆಯನ್ನು ನಾವೆಲ್ಲರೂ ಮೆಚ್ಚಿಕೊಂಡು ಈ ಸದನದಲ್ಲಿ ಕೆಲಸಮಾಡುತ್ತಿದ್ದೇವೆ. ಆದರೆ ನನ್ನಂತೆಯೇ ಇನ್ನೂ ಅನೇಕ ಹೊಸ ಸ್ನೇಹಿತರು ಏನು ಈ ಸದನದಲ್ಲಿದ್ದಾರೆ ಅವರಿಗೂ ಕಳವಳ ಇದೆ. ಅವರಿಗೂ ಕೂಡ ನಾನು ಏನು ಅಭಿಪ್ರಾಯ ವ್ಯಕ್ತಪಡಿಸಿದೆ ಹಾಗೆಯೇ ತಮ್ಮ ಕ್ಷೇತ್ರವನ್ನು ಪ್ರತಿನಿಧಿಸಬೇಕು, ಸಮಸ್ಯೆ ಬಗ್ಗೆ ಅನಿಸಿಕೆಯನ್ನು ಜನರ ಹತ್ತಿರಹೇಳಬೇಕೆಂದು ಇದೆ. ಈ ಸದನದಲ್ಲಿ ಕೆಲವೊಮ್ಮೆ ಮಹತ್ವವಾದ ಪ್ರಶ್ನೆಗಳು ಬರುತ್ತವೆ. ಆಗ ಆ ಪ್ರಶ್ನೆಗಳಿಗೆ ಹೆಚ್ಚು ಸಮಯ ಬೇಕಾಗುತ್ತದೆ. ನಾವೇ ಎಷ್ಟೋ ಸಾರಿ ಹೆಚ್ಚು ಟೈಮ್ ತೆಗೆದುಕೊಳ್ಳುತ್ತೇವೆ. ಈ ಸದನದ ಎಲ್ಲಾ ಸದಸ್ಯರು ಭಾಗವಹಿಸುತ್ತಾರೆ. ಮಾನ್ಯ ಅಧ್ಯಕ್ಷರೇ, ಪ್ರಶ್ನೆಗೆ ಇಷ್ಟೆ ಉಪ ಪ್ರಶ್ನೆಗಳು ಎಂದು ಕಾನೂನಿನಲ್ಲಿರುವುದಕ್ಕೆ ತಾವು ಒಪ್ಪಿಗೆ ಕೊಟ್ಟರೆ ಒಂದು ತಾಸಿನಲ್ಲಿ ಬಹುತೇಕ ಸಾಧ್ಯವಾದಷ್ಟು ಮುಗಿಸಲಿಕ್ಕೆ ಸಾಧ್ಯವಾಗುತ್ತದೆ. ಅದನ್ನು ಮಾಡಬಹುದು. ದಯವಿಟ್ಟು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನ ಹಾಗೂ ತಾವು ಅದಕ್ಕೆ ಅವಕಾಶ ಕೊಡಬೇಕು ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಾವೆಲ್ಲರೂ ನಮ್ಮ ನಮ್ಮ ಆತ್ಮಶೋಧನೆ ಮಾಡಿಕೊಳ್ಳಬೇಕಾದ ಘಟನೆ ನಡೆದಿದೆ. ತಮ್ಮ ಮನಸ್ಸಿಗೆ ಆಗಿರತಕ್ಕ ನೋವಿಗೆ ಈ ಸದನದ ಪರವಾಗಿ, ಮತ್ತು ವೈಯಕ್ತಿಕವಾಗಿ ನಾನು ಕ್ಷಮೆಯೆನ್ನು ಕೇಳಿಕೊಳ್ಳುತ್ತೇನೆ. ನಿಯಮದ ವ್ಯಾಪ್ತಿಯಲ್ಲಿ ಏನು ವ್ಯವಸ್ಥೆ ಇದೆ, ಏನು ಕೆಲವು ಪರಂಪರೆಗಳಿವೆ ಅವುಗಳನ್ನು ಎತ್ತಿ ಹಿಡಿಯುತಕ್ಕ ಕೆಲಸವನ್ನು ತಾವು ಮಾಡುತ್ತಲೇ ಬಂದಿದ್ದೀರಿ. ಆ ಕಡೆಯವರು ಇರಲಿ, ಈ ಕಡೆಯವರು ಇರಲಿ, ತಾವು ಅತ್ಯಂತ ನಿಷ್ಪಕ್ಷಪಾತವಾಗಿ ಕಳೆದ 2 ವರ್ಷಗಳಿಂದ ಈ ಸದನದಲ್ಲಿ ನಡೆಸಿಕೊಂಡು ಬರುತ್ತಿದ್ದೀರಿ. ಇದರಲ್ಲಿ ಯಾರದ್ದೂ ಭಿನ್ನಾಭಿಪ್ರಾಯ ಇಲ್ಲ. ಇದು ಬಹಳ ಸೂಕ್ಷ್ಮವಾದ ವಿಚಾರ. ಏಕೆಂದರೆ, ಯಾವುದೇ ಒಂದು ನಿಯಮದ ಬಗ್ಗೆ ನಮ್ಮ ಸದನದ ಸದಸ್ಯರ ಸೂಕ್ಷ್ಮತೆ ಇರಬೇಕಾಗುತ್ತದೆ. ಇದರ ಬಗ್ಗೆ ತಾವೂ ಕೂಡ ತಮ್ಮ ಸೆನ್ಸಿಟಿವಿಟಿಯನ್ನು ವ್ಯಕ್ತಪಡಿಸಿದಿರಿ. ಈ ಸದನದ ನಿಯಮಗಳ ಒಂದು ಕಟ್ಟುಪಾಡಿನಲ್ಲಿ ಹೋಗದಿದ್ದರೆ ಅಥವಾ ಕೆಲವು ಪರಂಪರೆಗಳ ಕಟ್ಟುಪಾಡಿನಲ್ಲಿ ಹೋಗದಿದ್ದರೆ ಸದನವನ್ನು ನಡೆಸುವುದು ಕಷ್ಟವಾಗುತ್ತದೆ, ಮತ್ತು ತಮ್ಮ ಮನಸ್ಸಿಗೆ ನೋವು ಆಗತಕ್ಕದ್ದೂ ಕೂಡ ಸಹಜ. ಇದನ್ನು ನಾವು ಕಂಡುಕೊಂಡಿದ್ದೇವೆ. ಆ ಕಡೆಯವರಾಗಲಿ, ಈ ಕಡೆಯವರಾಗಲಿ ಎಲ್ಲಾದರೂ ಎಡವಿರಬಹುದು. ಆದರೆ ಉದ್ದೇಶ ಪೂರ್ವಕವಾಗಿ ಯಾರೂ ಇದನ್ನು ಮಾಡಿರುವುದಿಲ್ಲ. ಪರಿಸ್ಥಿತಿಯ ಒತ್ತಡಕ್ಕೆ ಅನುಗುಣವಾಗಿ ಸ್ಪಂದಿಸಿ ಕೆಲವು ಸಾರಿ ನಾವು ಎಲ್ಲೆಮೀರಿ ಮಾತನಾಡಬಹುದು, ಎಲ್ಲೆಮೀರಿ ಹೋಗಬಹುದು. ತಮಗೆ ತಿಳಿದಿರುವಂತೆ ನಿಯಮಾವಳಿಗಳಿದ್ದರೂ ಕೂಡ

ಆದರ ಅರಿವಿದ್ದರೂ ಕೂಡ, ಮಾನ್ಯ ಸದಸ್ಯರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಕೆಲವು ಸಂದರ್ಭಗಳಲ್ಲಿ ಪರಿಸ್ಥಿತಿಗನುಗುಣವಾಗಿ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅವಕಾಶವನ್ನು ಮಾಡಿಕೊಟ್ಟಿಲ್ಲವೆಂದು ಯಾರೂ ಹೇಳುವುದಿಲ್ಲ. ಆದರ್ಶ ಸ್ವರೂಪದ ಉದಾತ್ತತೆಯನ್ನು ತಾವು ತೋರಿಸಿಕೊಟ್ಟಿದ್ದೀರಿ. ಇದಕ್ಕಾಗಿ ನಾವು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಆದರೆ ತಮ್ಮ ಈ ಉದಾತ್ತತೆಯನ್ನು ನಾವು ಬಹಳ ಸರಳವಾಗಿ ಬಳಸಿಕೊಳ್ಳುತ್ತಾ ಹೋದರೆ,

ನಾವು ಏನು ನಿಯಮಾವಳಿಗಳನ್ನು ಮಾಡಿಕೊಂಡಿದ್ದೇವೆ ಅವುಗಳನ್ನು ನಾವೇ ಮುರಿದಂತಾಗುತ್ತದೆ. ಅನೇಕಸಾರಿ ಇದರ ಬಗ್ಗೆ ತಾವು ತಮ್ಮ ಅನಿವಾರ್ಯತೆಯನ್ನು ವ್ಯಕ್ತಪಡಿಸಿ ನಿಯಮಾವಳಿಗಳ ಪ್ರಕಾರ ನಾನು ಸದನವನ್ನು ನಡೆಸಬೇಕು, ಹಾಗೆ ನಡೆಸುವುದಕ್ಕೆ ಆಗದಿದ್ದಾಗ ನಾನು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಂದು ಹೇಳಿದ್ದೀರಿ. ಬಹುಶಃ ಆ ಮಾತುಗಳು ನಮ್ಮ ಕಣ್ಣನ್ನು ತೆರೆಸುವಂಥ ಮಾತುಗಳು. ಪ್ರಶ್ನೋತ್ತರ ವೇಳೆ ಒಂದು ಗಂಟೆ ಮಾತ್ರ ಎಂದು ಸೀಮಿತವಾಗಿರತಕ್ಕದ್ದು ಕೇವಲ ಪಾರ್ಲಿಮೆಂಟ್‌ನಲ್ಲಿ ಮಾತ್ರವಲ್ಲ, ದೇಶದ ಎಲ್ಲ ರಾಜ್ಯಗಳ ಶಾಸನಸಭೆಗಳಲ್ಲೂ ಇದೆ. ಆ ಅವಧಿಯೊಳಗೇ ಮುಗಿಸಬೇಕಾದರೆ ನಾವೆಲ್ಲರೂ ತಮಗೆ ಸಹಕಾರವನ್ನು ಕೊಡಬೇಕಾಗುತ್ತದೆ. ಇದನ್ನು ವಿಸ್ತಾರ ಮಾಡಬೇಕಾದರೆ, ಹೊಸ ರೂಲನ್ನು ಮಾಡಬೇಕಾದರೆ ರೂಲ್ಸ್ ಸಮಿತಿಯನ್ನು ಮಾಡಿ, ಈ ಸದನ ಸೇರಿರುವಾಗಲೇ ನಾವೂ ಸೇರಿ, ಇದನ್ನು ಫೈನಲೈಸ್ ಮಾಡಬೇಕಾಗುತ್ತದೆಂದು ತಾವೇ ಹೇಳಿದ್ದೀರಿ. ಅದನ್ನು ಮಾಡಿದರೆ ನಾವು ದಿನನಿತ್ಯದ ವ್ಯವಸ್ಥೆಯಲ್ಲಿ ಏನು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಅದನ್ನು ಪರಿಹಾರ ಮಾಡುವುದಕ್ಕೆ ನಾವೆಲ್ಲರೂ ಪ್ರಯತ್ನಮಾಡೋಣ. ಈ ಸದನ ಸೇರಿರುವಾಗಲೇ ನಾವು ಕುಳಿತು ನಿಯಮಾವಳಿಗಳನ್ನು ಬದಲಾವಣೆ ಮಾಡಬಹುದು! ಶೂನ್ಯ ವೇಳೆಯನ್ನು ಪುನಃ ಪ್ರಾರಂಭಮಾಡಬೇಕೆಂದು ತಾವು ಹೇಳುವುದಾದರೆ ಅದಕ್ಕೆ ನಮ್ಮ ಅಡ್ಡಿ ಇಲ್ಲ. ಇವತ್ತು ನಮಗೆ ಬೇರೆ ಬೇರೆ ರೀತಿಯಲ್ಲಿ ಪ್ರೊವಿಷನ್‌ಗಳಿವೆ. ಉದಾಹರಣೆಗೆ ಹೇಳುವುದಾದರೆ, ನಿಯಮ 334, ಗಮನಸೆಳೆಯುವ ಸೂಚನೆ, ಅಡ್ಜರ್ನ್‌ಮೆಂಟ್ ಮೋಷನ್ ಇನ್ನೂ ಮುಂತಾದುವು ಇವೆ. ಈಗ ಶೂನ್ಯ ವೇಳೆ ಬೇಕಾಗುತ್ತದೆಂದು ನಮ್ಮಲ್ಲಿ ಭಾವನೆ ಬರಬಹುದು. ಅದಕ್ಕೆ ನಾವು ನಿಯಮಾವಳಿಗಳಲ್ಲಿ ಅವಕಾಶವನ್ನು ಮಾಡಿಕೊಳ್ಳಬಹುದು. ಇವತ್ತು ಏನು ಘಟನೆ ನಡೆದಿದೆ ಅದರ ಬಗ್ಗೆ ನಾನು ವಿಶೇಷವಾಗಿ ಕ್ಷಮೆ ಯಾಚಿಸುತ್ತೇನೆ. ನಮ್ಮನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯತಕ್ಕ ಅಧಿಕಾರ ಹಕ್ಕು ತಮಗಿದೆ. ಅದನ್ನು ತಾವು ನಮ್ಮ ಮೇಲೆ ಹೇರಿದಾಗ ಅದನ್ನು ಸ್ವೀಕಾರ ಮಾಡುವುದಕ್ಕೆ ನಾವು ಯಾವಾಗಲೂ ಸಿದ್ಧರಾಗಿದ್ದೇವೆ. ಇನ್ನು ಮುಂದೆ ತಾವು ಏನು ನಮಗೆ ಮಾರ್ಗದರ್ಶನ ಮಾಡುತ್ತೀರಿ ಅದರ ಪ್ರಕಾರ ನಾವು ಯಾವಾಗಲೂ ನಡೆದುಕೊಳ್ಳುತ್ತೇವೆಂದು ಈ ಸದನದ ಪರವಾಗಿ ಹೇಳಬಯಸುತ್ತೇನೆ. ನಿಯಮಾವಳಿಗಳನ್ನು ಏನಾದರೂ ಬದಲಾವಣೆ ಮಾಡಬೇಕಾದರೆ ನಾವೂ, ನೀವೂ ಕುಳಿತು ಬದಲಾವಣೆ ಮಾಡೋಣ. ಆದರೆ ಈಗಿರತಕ್ಕ ವ್ಯವಸ್ಥೆ ಏನಿದೆ ಅದಕ್ಕೆ ವಿರುದ್ಧವಾಗಿ ಹೋಗತಕ್ಕ ಅಧಿಕಾರ ನಮ್ಮಲ್ಲಿ ಯಾರಿಗೂ ಇಲ್ಲ. ಇನ್ನುಮುಂದೆ ಸುಸೂತ್ರವಾಗಿ ಈ ಸದನದ ಕಾರ್ಯಕ್ರಮಗಳನ್ನು ತಾವು ನಡೆಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವುಸಾರಿ ಪರಿಸ್ಥಿತಿ ವಿಕೋಪಕ್ಕೆ ಹೋದಾಗ ತಾವು ತಾಳ್ಮೆಯಿಂದ ಎಲ್ಲರನ್ನೂ ಹತೋಟಿಗೆ ತೆಗೆದುಕೊಂಡು, ಸಭೆಯನ್ನು ನಡೆಸಿಕೊಂಡು ಹೋಗತಕ್ಕ ಚಾಕಚಕ್ಯತೆಯನ್ನು ತಾವು ತೋರಿಸಿದ್ದೀರಿ. ಆದುದರಿಂದ ಅದೇರೀತಿ ಇನ್ನುಮುಂದೆಯೂ ಕೂಡ ಅಂಥ

ಮಾರ್ಗದರ್ಶನವನ್ನು ಈ ಸದನಕ್ಕೆ ಮತ್ತು ಸದಸ್ಯರಿಗೆ ತಾವು ನೀಡಬೇಕೆಂದು ಕೇಳಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ.

3.00 ಪಿ.ಎಂ.

ಪ್ರಕಟಣೆ

ಅಧ್ಯಕ್ಷರು : ತಾವು ವ್ಯಕ್ತಪಡಿಸಿರತಕ್ಕಂಥ ಸದಭಿಪ್ರಾಯಗಳಿಗೆ ನಾನು ಅಭಾರಿಯಾಗಿದ್ದೇನೆ, ಧನ್ಯವಾದಗಳು. ದಿನಾಂಕ 26.02.1992ನೇ ಬುಧವಾರದಂದು ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಸೇರಿ ಚರ್ಚಿಸಿ ಈ ಕೆಳಗೆ ಕಂಡಂಥ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಯಿತು. 27.02.1992 ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಂದುವರಿಯುವುದು. 28ನೇ ತಾರೀಖು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಂದುವರಿಯುವುದು ಮತ್ತು ಅವಕಾಶ ಸಿಕ್ಕಿದರೆ ಖಾಸಗಿ ಕಾರ್ಯಕಲಾಪ 29ರಂದು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ. ಮಾರ್ಚಿ ತಿಂಗಳ ತಾರೀಖು 1 ಮತ್ತು 2 ರಜಾ ದಿನಗಳು, 3ನೇ ತಾರೀಖು ಬೆಳಿಗ್ಗೆ 11.00ಗಂಟೆಯಿಂದ 1.00ಗಂಟೆಯವರಿಗೆ ಸರ್ಕಾರಿ ಕಾರ್ಯಕಲಾಪ ಹಾಗೂ ಮಧ್ಯಾಹ್ನ 2.00 ಗಂಟೆಗೆ ಆಯವ್ಯಯದ ಮಂಡನೆ ಸದ್ಯಕ್ಕೆ ಇಷ್ಟನ್ನು ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ತೀರ್ಮಾನ ಮಾಡಿದೆ.

ಹಕ್ಕುಚ್ಯುತಿ ನಿರ್ಣಯ

ಸದನದಲ್ಲಿ ದೂರದರ್ಶನದವರಿಂದ ತಾರತಮ್ಯ

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾನು ಒಂದು ಹಕ್ಕುಚ್ಯುತಿ ನಿರ್ಣಯವನ್ನು ತಮಗೆ ಕಳುಹಿಸಿದ್ದೇನೆ. ನಮಗಾದರೂ ಇಲ್ಲಿ ವರದಿ ಮಾಡುವ ವರದಿಗಾರರ ಮೇಲೆಯಾಗಲಿ ಅಥವಾ ವರದಿಯ ಸಂಬಂಧಪಟ್ಟವರ ಮೇಲೆಯಾಗಲಿ, ನಮ್ಮ ಭಾವನೆಗಳು ಇಲ್ಲ. ಇಲ್ಲಿ ಪ್ರಜಾಪ್ರಭುತ್ವದ ಪ್ರಶ್ನೆ ಇರುವುದು ಇಷ್ಟೆ. ಸಾಮಾನ್ಯವಾಗಿ ಪ್ರಜಾಪ್ರಭುತ್ವದಲ್ಲಿ ಈ ಪ್ರದರ್ಶನಗಳು ಇವೆಲ್ಲಾ ನಡೆದಾಗ ಗ್ಯಾಲರಿಯಲ್ಲಿ ಇರತಕ್ಕಂಥ ಜನರೂ ಸಹ ನೋಡುತ್ತಾರೆ, ಅದು ಪತ್ರಿಕೆಗಳಲ್ಲೂ ಕೂಡ ಬಂದಿರುತ್ತದೆ. ಇಲ್ಲಿ ಕುಳಿತಿರತಕ್ಕಂಥ ಪ್ರತಿಯೊಬ್ಬರ ಪ್ರಚಾರವೂ ಆಗಿರುತ್ತದೆ. ಆದರೆ ಸಾಮಾನ್ಯವಾಗಿ ಈ ದೂರದರ್ಶನ ಮಾಧ್ಯಮ ಮಾಡತಕ್ಕಂಥ ಒಂದು ರೀತಿ ನೀತಿ ಸರಿಯಿಲ್ಲ, ಇದರಿಂದ ನಿಜವಾಗಿ ನಮ್ಮ ಹಕ್ಕಿಗೆ ಧಕ್ಕೆಯಾಗಿದೆ ಎನ್ನುವ ಪ್ರಶ್ನೆ ಒಂದು. ಅದರ ಜೊತೆಗೆ ಈ ಸದನದ ವಿರೋಧ ಪಕ್ಷದ ನಾಯಕರಿಗೆ ಬಹಳ ಮಹತ್ತರವಾದ ಘನತೆ, ಗಾಂಭೀರ್ಯ, ಗೌರವವನ್ನು ನಾವು ಸಭೆಯಲ್ಲಿ ಕೊಡುತ್ತೇನೆ. ಒಂದು ಕಡೆ ಕೆಲವು ನಾಯಕರುಗಳನ್ನು ಮಾತ್ರ ಕ್ಯಾಮರದಲ್ಲಿ ತೋರಿಸತಕ್ಕಂಥದ್ದು, ಇನ್ನೊಂದು ಕಡೆ ವಿರೋಧಪಕ್ಷದ ನಾಯಕರನ್ನು ತೋರಿಸದೇ ಇರತಕ್ಕಂಥ ಅನೇಕ ದ್ವಂದ್ವಗಳ ಪರಿಸ್ಥಿತಿ ನಡೆಯುತ್ತಿದೆ. ಆದುದರಿಂದ ತಾವು ದಯವಿಟ್ಟು ಹಕ್ಕುಬಾಧ್ಯತೆ ಸಮಿತಿಗೆ ಕಳಿಸಿ ಸಂಬಂಧಪಟ್ಟವರನ್ನು ಕರೆಸಿ ಅವರಿಂದ ವಿವರವನ್ನು ಕೇಳಿ ಏನು ನಡೆದಿದೆ. ಎನ್ನತಕ್ಕಂಥಾದ್ದರ ಬಗ್ಗೆ ತಾವು ಚರ್ಚೆಗೆ ಒಂದು ಅವಕಾಶವನ್ನು ಮಾಡಿಕೊಡಬೇಕು. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ನಾನು ಯಾರ ಮೇಲೂ ವೈಯಕ್ತಿಕವಾಗಿ